ಶ್ರೀ ಬಿ. ಎಂ. ಇದಿನಬ್ಬ.—ಆ ವ್ಯಾಪಾರಿಗಳ ಹೆಸರುಗಳೇನು ?

ಶ್ರೀ ಬಿ. ಎ. ವಿಠ್ಠಲದಾಸ್ ಶೆಟ್ಟಿ.—ಅದು ಇನ್ನೂ ಕೋರ್ಟಿನಲ್ಲಿ ಕೇಸ್ ಇದೆ. ಅವರ ಹೆಸರುಗಳು ಈ ರೀತಿ ಇವೆ: (1) ವೆಂಕಟರಾಯ ಶೇಷಗಿರಿ ಮಲ್ಯ ವರ್‌ಡೂರ್, ಉಡುಪಿ, (2) ದಿ ಬಾಂಬೆ ಅಹಮದಬಾದ್ ಮಿರ್ ಸ್ಟೋರ್ಸ್, ಕೂಂದಾಪುರ್, ಮತ್ತು (3) ದಿ ಬಾಂಬೆ ಅಂಡ್ ಅಹಮದಬಾದ್ ಮಿರ್ ಸ್ಟೋರ್ಸ್, ಕೂಂದಾಪುರ್.

ಶ್ರೀ ಬಿ. ಎಂ. ಇದಿನಬ್ಬ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅವಶ್ಯಕವಾಗಿ ಪದಾರ್ಥಗಳು ಬೇಕೆಂದರೆ ಅನೇಕ ಅಂಗಡಿಗಳಲ್ಲಿ ಸಿಗುತ್ತಿಲ್ಲ. ಆದ್ದರಿಂದ ತನಿಖೆ ಶೀಘ್ರವಾಗಿ, ಉಗ್ರವಾಗಿ ಮಾಡುವ ಕಾರ್ಯಕ್ರಮವನ್ನು ಹಾಕುತ್ತೀರಾ ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಈಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂಥ ತೊಂದರೆಗಳು ಬಂದ ಹಾಗೆ ಕಾಣುವುದಿಲ್ಲ. ನಮಗೆ ದೂರುಗಳು ಏನೂ ಬಂದಿಲ್ಲ. ಅಂಥದ್ದು ಏನಾದರೂ ಸ್ಪೆಸಿಫಿಕ್ ಚಾರ್ಜ್ಸ್ ಇದ್ದರೆ, ಉಗ್ರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಈಗ ಅವಶ್ಯಕವಾದ ಸಾಮಗ್ರಿಗಳು ಎಂದರೆ, ಬೇಬಿ ಫುಡ್ ಅಮೂರ್ ಎಂಬುದೆರ್ನಾ ಇಲ್ಲಿ ಬ್ಲಾಕ್‌ಮಾರ್ಕೆಟಿನಲ್ಲಿ ಮಾರುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.— ಅಮೂರ್ ಬ್ಲಾಕ್ ಮಾರ್ಕೆಟಿನಲ್ಲಿ ಮಾರಬೇಕಾದ ಅವಶ್ಯಕತೆ ಇಲ್ಲ, ಇಲ್ಲಿ ಬೇಕಾದಷ್ಟು ಸಿಗುತ್ತದೆ. ತಮಗೆ ಬೇಕಾದರೆ, ಅಗತ್ಯ ಇದ್ದರೆ ಕೇಳಿ, ಕಳಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಮೂರು ಸಾವಿರ ಜನರಲ್ಲಿ ಮೂರು ಜನರ ಮೇಲೆ ಮಾತ್ರ ಕೇಸ್ ಹಾಕಿದ್ದೀರಿ. ನಮಗೆ ತಿಳಿದಿರುವ ಹಾಗೆ, ಈ ಮೂರು ಸಾವಿರ ಜನರು ಮಾಮೂಲು ಕೊಟ್ಟು ತಪ್ಪಿಸಿಕೊಂಡಿದ್ದಾರೆ. ಆದರೆ ಆ ಮೂರು ಜನ ಮಾತ್ರ ಮಾಮೂಲು ಕೊಟ್ಟಿಲ್ಲ, ಅದಕ್ಕೆ ಅವರ ಮೇಲೆ ಕೇಸ್ ಹಾಕಿದ್ದಾರೆ. ಅವರೆರ್ನಾ ಕೂಡ ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರಲ್ಲವೇ ?

ಶ್ರೀ ಬಿ. ವಿಠ್ಠಲದಾಸ ಶೆಟ್ಟಿ.—ಅದು ತಮ್ಮ ಅಭಿಪ್ರಾಯ. ಅಂಥದ್ದು ಏನಾದರೂ ಇದ್ದರೆ ದಯವಿಟ್ಟು ತಿಳಿಸಿ, ಅದಕ್ಕೆ ತಕ್ಕ ಕ್ರಮತೆಗೆದುಕೊಳ್ಳುತ್ತೇವೆ.

ಶ್ರೀ ಬೋಳ ರಘುರಾಮಶೆಟ್ಟಿ.—ಷಾಪ್ ಇನ್‌ಸ್ಪೆಕ್ಟ್ ಮಾಡುವುದಕ್ಕೆ ಎಷ್ಟು ಸಿಬ್ಬಂದಿ ಇದ್ದಾರೆ, ಕೇವಲ ಇಷ್ಟೇ ಇನ್‌ಸ್ಪೆಕ್ಟ್ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಬಿ. ವಿಠ್ಠಲದಾಸ್ ಶೆಟ್ಟಿ.—ಒಂದೊಂದು ಜಿಲ್ಲೆಯಲ್ಲಿ ಸಿವಿರ್ ಸಪ್ಲೈಸ್ ಇನ್‌ಸ್ಪೆಕ್ಟರ್ ಇದ್ದಾರೆ. ದೊಡ್ಡ ಜಿಲ್ಲೆಯಲ್ಲಿ ಇಬ್ಬರು ಇದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಬ್ಬರು ಇದ್ದಾರೆ.

Execution of Karanja Irrigation Project

603. **Sri S. BHIMANNA** (Bhalki).—

Will the Chief Minister be pleased to state :—

(*a*) when the survey of Karanja Irrigation Project was started and completed ;

(*b*) the estimate of the Project, area of submersion and area to be irrigated in detail ;

(*c*) whether the estimate of the above project was Rs. 5 crore when the survey was completed and now it is Rs. 10 crores ;

(*d*) the dates of sending the proposals to the Government of India for technical clearance ;

(SRI S. BHIMANNA)

(*e*) whether the Government had assured the House during discussion at the end of the day on 28th January 1969 that this Project will be started in the Fourth Five Year Plan ;

(*f*) whether the Government is aware that Bidar District is most backward area in the State and no irrigation Project was taken in Godawari basin since the beginning even though there is sufficient irrigation potential in the District according to the survey conducted ;

(*g*) whether representations are being made from the last ten years or more to take up and complete this Project earlier ;

(*h*) if so, the action the Government has taken in the matter ;

(*i*) whether it is a fact that there is no objection for the construction of this project by any State ; if so, the reason for this project pending since a long time without execution ;

(*j*) the amount allotted for this project in the budget for the year 1967-68 ;

(*k*) the extent of amount spent so far on it ?

Sri D. PARAMESWARAPPA (Deputy Minister for Major Irrigation and Electricity) [On behalf of SRI VEERENDRA PATIL (Chief Minister)].—

(*a*) (i) In November 1961.
(ii) In August 1967.

(*b*) Estimated cost Rs. 990 lakhs.

Area of Submersion	...	9,850 acres.
Irrigation proposed	...	67,000 ,,
Sugar Cane	...	6,000 ,,
Garden	...	2,000 ,,
Khariff paddy	...	20,000 ,,
Khariff dry	...	26,000 ,,
Rabi dry	...	13,000 ,,

(*c*) No.

(*d*) 2nd August 1967.

(*e*) It was mentioned that every attempt would be made to nclude this scheme in the IV Plan Schemes.

(*f*) There are no major/medium irrigation projects in the District.

(*g*) Yes.

(*h*) Investigation has been completed and the project report sent to Government of India for technical clearance.

(*i*) Yes.
Due to paucity of funds.

(*j*) Nil.

(*k*) Does not arise in view of the above.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆಯಲ್ಲಿ 20 ಸಾವಿರಕ್ಕಿಂತಲೂ ಹೆಚ್ಚು ಭೂಮಿ ಬಾವಿ ನೀರಿನಿಂದ ಇರಿಗೇಟ್ ಆಗುತ್ತಾ ಇದೆ. ಅಲ್ಲಿ ವಾಟರ್ ಲೆವೆಲ್ ಕಡಿಮೆ ಇದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

† Sri D. PARAMESWARAPPA.—It has come to the notice of the Government.

ಶ್ರೀ ಎಸ್. ಭೀಮಣ್ಣ.—ಅಲ್ಲಿ ಒಂದು ಷುಗರ್ ಫ್ಯಾಕ್ಟರಿ ಷುರು ಆಗಿದೆ. ಅಲ್ಲಿ ನೀರಿಲ್ಲದೆ ಇವತ್ತಿನ ದಿವಸ ಅಲ್ಲಿ ಎಲ್ಲಾ ಒಣಗಿ ಹೋಗಿದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

Sri D. PARAMESWARAPPA.—This question relates to Karanja Project and not to lift irrigation, Sir.

ಶ್ರೀ ಎಂ. ನಾಗಪ್ಪ. - ಈಗ 990 ಲಕ್ಷ ರೂಪಾಯಿ ಅಂದಾಜು ವೆಚ್ಚ ಎಂದು ಹೇಳುತ್ತಿದ್ದೀರಿ. ಆದರೆ ಇರಿಗೇಷನ್ ಆಗತಕ್ಕಂತದ್ದು ಕೇವಲ 67 ಸಾವಿರ ಎಕರೆ. ಇದು ನಿಮ್ಮ ರೆಕ್ಕದ ಪ್ರಕಾರ ಫೀಸಿಬಲ್ ಪ್ರೊಜೆಕ್ಟೇ ಏನು ?

Sri D. PARAMESWARAPPA.—In the report it is found to be feasible.

Sri J. P. SARVESH.—In answer (*e*) it is said that every attempt would be made to include this scheme in the fourth plan. May I know who is responsible for defeating you in your attempt to include this in the fourth plan ? Is it Government of India or anybody else ?

Sri D. PARAMESWARAPPA.—We have said that every attempt is being made to include it in the Fourth Plan. It is included in the draft plan also. The Draft Plan is not yet finalised.

ಶ್ರೀ ಜಿ. ರಾಮೇಗೌಡ.—ಒಂದು ಎಕರೆಗೆ ಒಂದು ಸಹಸ್ರ ರೂಪಾಯಿ ಮೇಲೆ ಖರ್ಚು ಇದ್ದರೆ, ಅದು ಫೀಸಿಬಲ್ ಪ್ರೊಜೆಕ್ಟ್ ಅಲ್ಲವೆಂದು ರಾಜ್ಯದಲ್ಲಿ ಎಷ್ಟೋ ಯೋಜನೆಗಳನ್ನು ವಜಾ ಮಾಡಿದ್ದಾರೆ. ಈಗ 67 ಸಾವಿರ ಎಕರೆಗಳಿಗೆ 990 ಲಕ್ಷ ಖರ್ಚು ಮಾಡುತ್ತಿರುವುದು ಹೇಗೆ ಸರಿಯಾಗುತ್ತದೆ ?

ಶ್ರೀ ವೀರೇಂದ್ರ ಪಾಟೀಲ್.—ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಿಂತ ಮೇಲಾದರೆ ಫೀಸಿಬಲ್ ಅಲ್ಲವೆಂದು ಮಾನ್ಯ ಸದಸ್ಯರು ಹೇಳಿದರು. ರೆಸ್ಪೋರೇಷನ್‌ಗೆ ಒಂದು ರೇಟ್ ಇಟ್ಟು ಕೊಂಡಿದ್ದೇವೆ. ದೊಡ್ಡ ಪ್ರೊಜೆಕ್ಟ್‌ಗಳಿಗೆ ಇದನ್ನು ಮಾಡುವುದಕ್ಕಾಗುವುದಿಲ್ಲ. ಆ ರೆಕ್ಕ ಇಟ್ಟು ಕೊಂಡರೆ, ನಾವು ಎಲ್ಲೂ ನೀರಿನ ಸೌಕರ್ಯ ಒದಗಿಸುವುದಕ್ಕಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ, ಕಬಿನಿ ಪ್ರೊಜೆಕ್ಟಿನಲ್ಲಿ ಒಂದು ಎಕರೆಗೆ ಮೂರು ಸಾವಿರ ರೂಪಾಯಿವರೆಗೆ ಹೋಗುತ್ತದೆ. ಅದ್ದರಿಂದ ಕೇವಲ ಖರ್ಚು ಹೆಚ್ಚಾಗುತ್ತದೆಂದು ನಾವು ಕೈಬಿಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಭೀಮಣ್ಣ.—ಬೀದರ್ ಜಿಲ್ಲೆ ಬಹಳ ಹಿಂದುಳಿದ ಪ್ರದೇಶ. ಅದ್ದರಿಂದ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಾದರೂ ಈ ಕಾರಂಜಿ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಮತ್ತು ಅದನ್ನು ಪೂರ್ತಿ ಮಾಡುವುದಾದರೆ ಆ ಪ್ರದೇಶದಲ್ಲಿ ಹೆಚ್ಚಿನ ನೀರಾವರಿಗೆ ಅನುಕೂಲವಾಗಿ ಅಲ್ಲಿನ ಸಕ್ಕರೆ ಕಾರ್ಖಾನೆಗೆ ಅನುಕೂಲವಾಗುತ್ತದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಬಂದಿದೆ.

ಶ್ರೀ ವಿ. ಎನ್. ಪಾಟೀಲ್.—ಈ ವರ್ಷವೇ ಆ ಪ್ರೊಜೆಕ್ಟ್ ಸ್ಟಾರ್ಟ್ ಮಾಡುವುದಕ್ಕೆ ಅಮೌಂಟ್ ಇಯರ್‌ಮಾರ್ಕ್ ಮಾಡುತ್ತೇವೆಂದು ಆಶ್ವಾಸನೆ ಕೊಡುತ್ತೀರಾ ?

Sri D. PARAMESWARAPPA.--No amount is earmarked. It all depends upon the availability of funds to take up the project or not.